ಸವಣೂರ ತಾಲ್ಲೂಕು ಹತ್ತಿಮತ್ತೂರ ಕೆರೆ ಕಾಮಗಾರಿ ಕೆಲಸ

590 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರ ತಾಲ್ಲೂಕ ಹತ್ತಿಮತ್ತೂರ ಕೆರೆ ಹೂಳು ತೆಗೆಯುವ ಕೆಲಸಕ್ಕೆ 1993-94ರ ಬಜೆಟ್‌ನಲ್ಲಿ ಎಷ್ಟು ಹಣ ಇಡಲಾಗಿತ್ತು.

ಆ) ಸದರಿ ಕೆಲಸ ಎಂದು ಪ್ರಾರಂಭ ಮಾಡಲಾಗುವುದು.

ಇ) ಅದಕ್ಕೆ ತಗಲಿದ ಖರ್ಚು ಎಷ್ಟು

ಈ) ಬಾಕಿ ಉಳಿದ ಕೆಲಸ ಯಾವಾಗ ಮಾಡಲಾಯಿತು

ಉ) ಸದರಿ ಕೆರೆ ಏರಿ ಮೇಲೆ ಮಣ್ಣು ಹಾಕಿ ಸಾರ್ವಜನಿಕರ ವಾಹನಗಳಿಗೆ, ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಸದರಿ ಕೆರೆ ಕೆಲಸ ಕಳಪೆ ಕಾಮಗಾರಿಯಾಗಿದ್ದು ಸಾರ್ವಜನಿಕರ ದೂರುಗಳು ಬಂದಿರುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 14.47 ಲಕ್ಷರೂ.ಗಳು

ಆ) ದಿನಾಂಕ 4.4.94 ರಂದು

ಇ) ಜುಲೈ ಅಂತ್ಯದವರೆಗೆ 11.12 ಲಕ್ಷರೂ.ಗಳು

ಈ) ಈ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಉ) ಸಾರ್ವಜನಿಕ ವಾಹನಗಳಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಊ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ವಿವಿಧ ಮುಜರಾಯಿ ಕಾಯ್ದೆಗಳು.

49 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ ಮದರಾಸು ಕರ್ನಾಟಕ ಹಳೇ ಮೈಸೂರು ಹಾಗೂ ಕೊಡಗು ಕರ್ನಾಟಕದಲ್ಲಿ ಜಾರಿ ಇರುವ ಮುಜರಾಯಿ ಕಾಯ್ದೆಗಳು ಯಾವುವು?

ಆ) ಇವುಗಳಿಲ್ಲವನ್ನು ಕ್ರೋಢೀಕರಿಸಿ ಒಂದೇ ಸಾಮೂಹಿಕ ಮುಜರಾಯಿ ಧಾರ್ಮಿಕ ಕಾಯ್ದೆ ಮಾಡುವಲ್ಲಿ ಸರ್ಕಾರ ವಿಫಲವಾಗಲು ಕಾರಣವೇನು ಹಾಗಿದ್ದಲ್ಲಿ ಒಂದೇ ಸಾಮೂಹಿಕ ಕಾಯ್ದೆ ಮಾಡಲು ಸರ್ಕಾರದರು ಕ್ರಮ ಕೈಗೊಳ್ಳುವರೆ ಹಾಗಿದ್ದಲ್ಲಿ ಎಂದು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು)

ಅ) ಧಾರ್ಮಿಕ ದತ್ತಿ ಇಲಾಖೆಯಲ್ಲಿ ಜಾರಿಯಲ್ಲಿರುವ ಕಾಯ್ದೆಗಳು ಈ ಕೆಳಕಂಡಂತೆ ಇದೆ.

1. ಮುಂಬೈ ಕರ್ನಾಟಕ ಪ್ರಾಂತ್ಯಕ್ಕೆ ದಿ ಬಾಂಬೆ ಪಬ್ಲಿಕ್ ಆಕ್ಟ್ 1950 (ಹಳೇ ಮುಂಬೈಯಿನ 4 ಜಿಲ್ಲೆಗಳು)

2. ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ದಿ ಹೈದರಾಬಾದ್ ಎಂಡೋಮೆಂಟ್ ರೆಗ್ಯೂಲೇಷನ್ ಫ 1349 (ಹಳೆಹೈದರಾಬಾದ್‌ನ 3 ಜಿಲ್ಲೆಗಳು)

3. ಮದರಾಸು ಕರ್ನಾಟಕ ಪ್ರಾಂತ್ಯಕ್ಕೆ ದಿ ಮದರಾಸು ಹಿಂದೂ ಮತೀಯ ಮತ್ತು ಧರ್ಮಾರ್ಥ ಉಂಬಳಿ ಕಾಯ್ದೆ 1951 (2 ಜಿಲ್ಲೆಗಳು ದಕ್ಷಿಣ ಕನ್ನಡ ಮತ್ತು ಬೆಳಗಾಂ)